ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

'MUNJAVU' Kannada Weekly. KOPPA - CHM. ಫೋನ್ : 114

6ನೇ ವರ್ಷ 38 ನೇ ಸಂಚಿಕೆ ಕೊಪ್ಪ 17-4-1988 ಭಾನುವಾರ ಬೆಲೆ 25 ಪೈಸೆ

ಅಡಿಕೆ ಬೇರು ಹುಳ, ಹಳದಿರೋಗದ ಬಗ್ಗೆ ತಜ್ಞರ ಸಲಹೆ

ಶೃಂಗೇರಿ: ಇಲ್ಲಿನ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ಆಶ್ರಯದಲ್ಲಿ ಅಡಿಕೆ ತೋಟಕ್ಕೆ ಬೀಳುವ ಬೇರು ಹುಳ ಮತ್ತು ಹಳದಿ ರೋಗದ ಬಗ್ಗೆ, ಬೆಂಗಳೂರು ಕೃಷಿ ವಿಶ್ವ ವಿದ್ಯಾಲಯ ಮತ್ತು ಶಾಖಾ ತೋಟಗಾರಿಕೆ ಇಲಾಖೆಯ ತಜ್ಞರಿಂದ ವಿಶೇಷ ಸಲಹೆಗಳನ್ನು ನೀಡಲಾಗುವುದು. ರೈತರು ಭಾಗವಹಿಸಿ ಪ್ರಯೋಜನ ಪಡೆಯಬೇಕಾಗಿ ವಿನಂತಿಸಲಾಗಿದೆ. ದಿನಾಂಕ 26-4-88ರ ಮಂಗಳವಾರ ಬೆಳಿಗ್ಗೆ 10 ಗಂಟೆಗೆ ಬ್ಯಾಂಕ್ ಆವರಣದಲ್ಲಿ ಈ ಕಾರ್ಯಕ್ರಮ ನಡೆಯುತ್ತದೆ

ಕೊಪ್ಪ - ತೀರ್ಥಹಳ್ಳಿ ರಸ್ತೆಯ ಕುಂಬಾರಕೊಪ್ಪ ಗ್ರಾಮದ 50 ಎಕರೆಯಲ್ಲಿ

ಮರಗಳ್ಳರ ಸಂಚಿನಿಂದ ದಟ್ಟ ಕಾಡಿನ ಲೂಟಿ ತಪ್ಪಿಸಲು ನಾಗರಿಕರ ಹೋರಾಟ ಆರಂಭ

ಕೊಪ್ಪ: ಇಲ್ಲಿಗೆ ಸಮೀಪದ ಸೂರ್ಯದೇವಸ್ಥಾನದ ಬಳಿಯ ದಟ್ಟ ಮತ್ತು ಸಮೃದ್ಧವಾದ ಗುಬ್ಬಗದ್ದೆ ಕಾಡನ್ನು ಮೋಸದಿಂದ ಕಬಳಿಸಲು ಕೆಲವು ಮಂದಿ ಮರಕರು ನಡೆಸಿರುವ ಪ್ರಯತ್ನಗಳ ವಿರುದ್ಧ ಗ್ರಾಮಸ್ಥರು ಮತ್ತು ಪರಿಸರ ಪ್ರೇಮಿಗಳು ಬಹುಮುಖ ಹೋರಾಟವನ್ನೇ ಸಾರಿದ್ದಾರೆ.

ಈ ಧರ್ಮಯುದ್ಧದ ನೇತೃತ್ವ ವಹಿಸಲು ಹರುಹೂರು ಮಂಡಲ ಪಂಚಾಯಿತ್ತಿ ಆಶ್ರಯದಲ್ಲಿ ಏ. 11ರಂದು ನಡೆದ ಸಾರ್ವಜನಿಕ ಸಭೆಯಲ್ಲಿ "ಗುಬ್ಬಗದ್ದೆ ಅರಣ್ಯ ರಕ್ಷಣಾ ಹೋರಾಟ ಸಮಿತಿ" ರಚಿತವಾಗಿದ್ದು, ಇದರಲ್ಲಿ ಸ್ಥಳೀಯ ಮತ್ತು ಸುತ್ತಮುತ್ತಲ ರೈತಾಪಿ ಜನತೆಯೊಂದಿಗೆ ನಾನಾ ರಂಗಗಳ ಪ್ರಜ್ಞಾವಂತ ಜನ ಪಕ್ಷ ಭೇದವಿಲ್ಲದೆ ಸಕ್ರಿಯವಾಗಿ ಪಾಲ್ಗೊಂಡಿದ್ದಾರೆ.

ಧೂರ್ತ ಕಾಡು ಲೂಟಿಕೋರರ ಹಿಂದಿನ ಅನ್ಯಾಯಗಳ ವಿರುದ್ಧ ತಡೆಯಾಜ್ಞೆ ಮತ್ತು ನ್ಯಾಯ ಕೋರಿ, ಈ ಸಮಿತಿಯ ಮಾರ್ಗದರ್ಶನದಲ್ಲಿ "ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆ"ಯೊಂದನ್ನು ಹೈಕೋರ್ಟಿನಲ್ಲಿ ಕೆಲವು ಮಂದಿ ನಾಗರಿಕರು ದಾಖಲಿಸಿದ್ದು, ನ್ಯಾಯಮೂರ್ತಿ ದೊಡ್ಡಕಾಳೇಗೌಡರ ಆದೇಶದಂತೆ ಪ್ರತಿವಾದಿಗಳಿಗೆ ತುರ್ತು ನೋಟೀಸನ್ನು ಏ. 16ರಂದು ರವಾನಿಸಲಾಗಿದೆ.

ಹೈಕೋರ್ಟಿನ ವಿಭಾಗ ಪೀಠ ಈ ಮರ ಕಟುಕರ ಪರವಾಗಿ ನೀಡಿರುವ ತೀರ್ಪಿನ ಮೇಲೆ ಸುಪ್ರೀಂಕೋರ್ಟಿಗೆ ಹೋಗಲು ಅರಣ್ಯ ಇಲಾಖೆಗೆ ಸರ್ಕಾರ ಅನುಮತಿ ನೀಡಿದ್ದು, ಈ ದಿಕ್ಕಿನಲ್ಲೂ ಬಿರುಸಿನ ಚಟುವಟಿಕೆ ಸಾಗಿದೆ. ಆದರೆ, ಮರ ಕಟುಕರಿಗೆ ಅರಣ್ಯ ಇಲಾಖೆ ಅಧಿಕಾರಿಗಳು ಅಡ್ಡಿಪಡಿಸಬಾರದೆಂದು ಹೈಕೋರ್ಟಿನ ಆದೇಶ ಇನ್ನೂ ಚಾಲ್ತಿಯಲ್ಲಿರುವುದರಿಂದ, ಅದಕ್ಕೆ ಪೂರ್ವಭಾವಿಯಾಗಿ ಮರಗಳ ಎಣಿಕೆ, ತನಿಖೆ ಮತ್ತಿತರ ಕೆಲಸಗಳೂ ನಿಲ್ಲದೆ ನಡೆಯುತ್ತಿವೆ.

50 ಎಕರೆಯ ಹಿನ್ನೆಲೆ

ಕೊಪ್ಪ ತಾ|| ಕುಂಬಾರಕೊಪ್ಪ ಗ್ರಾಮದ ಸ.ನಂ. 54ರ ಸುಮಾರು 118 ಎಕರೆ ಪೈಕಿ 1930ರಲ್ಲಿ ದರ್ಖಾಸ್ತಾಗಿದ್ದ 50 ಎಕರೆ ಭೂಮಿ ಹಲವು ಕೈ ಬದಲಾವಣೆಗಳ ನಂತರ ಕೊಪ್ಪದ ಡಿ. ಸುಬ್ರಾವ್, ಮೂರ್ತಿ ರಾವ್, ಮೋತಿಲಾಲ್ ಮತ್ತು ರಾಮಪ್ಪ ಎಂಬವರಿಗೆ ಸೇರಿದ್ದು. ಅವರು ಆ ಭೂಮಿಯಲ್ಲಿದ್ದ ಮರಗಳನ್ನು 1968-69ರಲ್ಲಿ ನ.ರಾ. ಪುರದ ರಜಾಕ್ ಎಂಬ ಮರ ವ್ಯಾಪಾರಿಗೆ ಮಾರಿದರು. 1969-71ರ ನಡುವೆ 35 ಸಾವಿರ ಘನ ಅಡಿ ನಾಟ ಮತ್ತು ಸುಮಾರು 36 ಸಾವಿರ ಚೀಲ ಇದ್ದಿಲು ಸಾಗಣೆಯಾಗಿತ್ತು.

ಪುನಃ ಮರ ಕಡಿತಕ್ಕೆ ಸನ್ನಾಹ

ಆನಂತರ ಈ 50 ಎಕರೆ ಭೂಮಿಯನ್ನು ಮಾಲೀಕರು 1981ರಲ್ಲಿ ಶೃಂಗೇರಿ ತಾ|| ನವರಾದ ಶ್ರೀಮತಿ ಶಾರದಮ್ಮ ಕೋಂ ಎಚ್. ಜಿ. ವೆಂಕಟರಮಣಯ್ಯ, ಎಸ್. ಆರ್. ಮಹದೇವರಾವ್, ವೆಂಕಟರಾವ್, ಸೂರ್ಯನಾರಾಯಣರಾವ್ ಎಂಬವರಿಗೆ ಮಾರಿದರು. ಅದೇ ಸೆಪ್ಟೆಂಬರ್‌ನಲ್ಲಿ ಈ 50 ಎಕರೆಯಿಂದ ನಾಟ ಕಡಿದು ಸಾಗಿಸಲು ಪರವಾನಗಿ ಕೋರಿ ಎಂ. ಇಸ್ಮಾಯಿಲ್, ಬಾಪು ಕುಂಞ ಬ್ಯಾರಿ, ಈಶ್ವರ ಭಟ್ ಮತ್ತು ಮುರಳಿ ಮೋಹನ ಶೆಟ್ಟಿ ಎಂಬ ಪುತ್ತೂರು ಸುತ್ತಲಿನ ಮರ ವ್ಯಾಪಾರಿಗಳಿಂದ ಅರಣ್ಯ ಇಲಾಖೆಗೆ ಅರ್ಜಿ ಬಂತು.

ಆದರಲ್ಲಿ ಈ ಭೂಮಿಗೆ 'ಸ.ನಂ. 54ರ ಪೈಕಿ ರೀಸರ್ವೆ ನಂ 135ರ 50 ಎಕರೆ' ಎಂದು ಕಾಣಿಸಿತ್ತು. ಸ್ಕೆಚ್ ಬದಲಾವಣೆಯಾಗಿತ್ತು ಮತ್ತು ಚಕ್ಕುಬಂದಿ ವ್ಯತ್ಯಾಸವಿತ್ತು. 54ನೇ ಸ.ನಂ ನಲ್ಲಿ ಈಗಾಗಲೇ ನಾಟ ಸಾಗಣೆಯಾಗಿದ್ದ 50 ಎಕರೆ ಭೂಮಿ ಬಿಟ್ಟರೆ ಬೇರೆ ಹಿಡುವಳಿ ಭೂಮಿ ಇರಲಿಲ್ಲ. ಆದ್ದರಿಂದ ಈ ಅರ್ಜಿಯನ್ನು ಆಗಿನ ಡಿ.ಎಫ್.ಓ ಸುಂದರ ನಾಯ್ಕ ಸಾರಾಸಗಟಾಗಿ ತಿರಸ್ಕರಿಸಬಹುದಿತ್ತು. ಆದರೆ ಅವರು ಹಾಗೆ ಮಾಡದೆ, ಈ ಜಮೀನಿನ ನಿಜವಾದ ಅಸ್ತಿತ್ವದ ಕುರಿತು ಸರ್ವೆ ಇಲಾಖೆಯೊಡನೆ ಪತ್ರ ವ್ಯವಹಾರ ಮಾಡಿದರು.

ಹೈಕೋರ್ಟಿಗೆ ಪ್ರಕರಣ, ಮರಗಳ್ಳರಿಗೆ ಜಯ

ಹೀಗೇ 2 ವರ್ಷ ಕಳೆದಾಗ 1983ರ ಜುಲೈಯಲ್ಲಿ ಮರ ವ್ಯಾಪಾರಿಗಳು ಹೈಕೋರ್ಟ್ ಹತ್ತಿದರು. ತಮ್ಮ ಅರ್ಜಿಗೆ 60 ದಿನದೊಳಗೆ ಮಂಜೂರಾತಿಯಾಗಲಿ, ಪ್ರತ್ಯುತ್ತರವನ್ನಾಗಲಿ ಕೊಡದಿರುವುದರಿಂದ '1976 ಕರ್ನಾಟಕ ಮರಗಳ ಸಂರಕ್ಷಣೆ ಕಾಯಿದೆ'ಯ 8ನೇ ಸೆಕ್ಷನ್ ಪ್ರಕಾರ, ತಮಗೆ ಮರ ಕಡಿಯುವ ಹಕ್ಕು ತಂತಾನೆ ಲಭಿಸಿರುವುದಾಗಿ ಅವರು ವಾದಿಸಿದ್ದರು.

ಈ ಪ್ರಕರಣದಲ್ಲಿ ನಡೆದಿರುವ ಮೋಸವನ್ನು ಸಾಬೀತುಪಡಿಸಿ ಅರಣ್ಯವುಳಿಸಲು ಅರಣ್ಯಾಧಿಕಾರಿಗಳು ಅಗತ್ಯವಿರುವ ಹಳೆಯ ಸ್ಕೆಚ್‌ಗಳು, ಚಕ್ಕುಬಂದಿ ದಾಖಲೆಗಳು, ಮರ ಸಾಗಣೆಯಾದ ಸಾಕ್ಷ್ಯಾಧಾರಗಳು ಮುಂತಾದ ಎಲ್ಲಾ ತರಹದ ದಾಖಲೆಗಳನ್ನೂ ಎಲ್ಲೆಲ್ಲಿಂದಲೋ ಕಲೆ ಹಾಕಿ ಹೈಕೋರ್ಟಿನ ಸರ್ಕಾರಿ ವಕೀಲರಿಗೆ ಒದಗಿಸಿದರಾದರೂ '60 ದಿನದೊಳಗೆ...' ಎಂಬ ತಾಂತ್ರಿಕ ಅಂಶದ ಆಧಾರದಲ್ಲಿ ಮರ ವ್ಯಾಪಾರಿಗಳ ಪರವಾಗಿಯೇ ತೀರ್ಪು ಬಂದಿತು.

'ಕೋರ್ಟ್ ನಿಂದನೆ'

ಇದರ ವಿರುದ್ಧ ಇಲಾಖೆ ಹೈಕೋರ್ಟಿನ ವಿಭಾಗ ಪೀಠಕ್ಕೆ ಸಲ್ಲಿಸಿದ ಮೇಲ್ಮನವಿಗೂ ಇದೇ ಗತಿಯಾಯಿತು. ಈ ಪೈಕಿ ವಿಭಾಗ ಪೀಠದ ಆದೇಶದಂತೆ, ಅರ್ಜಿದಾರರಿಗೆ ಸಲ್ಲಬೇಕಾದ ಭೂಮಿ ಯಾವುದೆಂಬುದನ್ನು ನಿಷ್ಕರ್ಷೆ ಮಾಡಿ, ಚಿಕ್ಕಮಗಳೂರು ಜಿಲ್ಲಾಧಿಕಾರಿ ಬಿ. ಪಾರ್ಥಸಾರಥಿ 17.10.86ರಲ್ಲಿ 'ಆದೇಶ' ನೀಡಿದ್ದನ್ನು ಕಟ್ಟುನಿಟ್ಟಾಗಿ ಪರಿಗಣಿಸಿದ ವಿಭಾಗ ಪೀಠ, ಅವರ ಮೇಲೆ ಕೋರ್ಟ್ ನಿಂದನೆ ಕ್ರಮಕ್ಕೆ ಆದೇಶಿಸಿತ್ತು. ಆದರೆ ಅದನ್ನೀಗ ಕೈಬಿಡಲಾಗಿದೆ.

ಅನ್ಯಾಯಕ್ಕೆ ಸವಾಲು

ಇದೀಗ ಸಾರ್ವಜನಿಕ ಹಿತಾಸಕ್ತಿಯ ಮೊಕದ್ದಮೆಯಲ್ಲಿ ಕೆ. ವಿ. ಶಿವಸ್ವಾಮಿ, ಎಸ್. ವಿ. ಶ್ರೀಧರ ಶೆಟ್ಟಿ ಮತ್ತು ಸಿರಿಮನೆ ನಾಗರಾಜ್ ಅವರುಗಳು, ಈ ಭೂಮಿಯಲ್ಲಿ ಮರ ಕಡಿಯಲು ಅವಕಾಶ ನೀಡುವುದರಿಂದಾಗುವ ಅನ್ಯಾಯಗಳನ್ನು ಈ ರೀತಿ ಪಟ್ಟಿ ಮಾಡಿದ್ದಾರೆ:

1) ಅತ್ಯಂತ ಆಯಕಟ್ಟಿನ ಈ ನಿತ್ಯ ಹರಿದ್ವರ್ಣ ಕಾಡು ನಾಶವಾದರೆ ಸುತ್ತಮುತ್ತಲ ಪರಿಸರ ಸಮತೋಲನದ ಮೇಲೆ ಉಂಟಾಗುವ ತೀವ್ರ ದುಷ್ಪರಿಣಾಮಕ್ಕೆ ಮುಂದೆಂದೂ ಪರಿಹಾರ ಸಾಧ್ಯವಿಲ್ಲ; 2) ಈ ಕಾಡಿನಲ್ಲಿ ಹುಟ್ಟಿ ಹರಿದು 300 ಎಕರೆಯಷ್ಟು ಜಮೀನಿಗೆ ನೀರುಣಿಸುತ್ತಿರುವ ಗುಬ್ಬಗದ್ದೆ ಹಳ್ಳ ಬತ್ತಿಹೋಗಿ, ಈ ಎಲ್ಲ ಭೂಮಿ ಬಂಜರಾಗುತ್ತದೆ; 3) ಕನಿಷ್ಠ ಒಂದು ಕೋಟಿಯಷ್ಟು ಬೆಲೆಯ ಸಾರ್ವಜನಿಕ ಸ್ವತ್ತಾದ ಕಾಡು ಲೂಟಿಯಾಗಿ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತದೆ.

ಇದಲ್ಲದೆ, ಇಂಥ ಲೂಟಿಗಾಗಿ ಬೇಕೆಂದೇ ನಕಲಿ ಮತ್ತಿತರ ದಾಖಲೆಗಳನ್ನು ತಿದ್ದಿ ವಂಚನೆ ಮಾಡಲು ಯತ್ನಿಸಿದ್ದಕ್ಕಾಗಿ ಈ ಮರ ವ್ಯಾಪಾರಿಗಳಿಗೆ ತಕ್ಕ ಶಿಕ್ಷೆ ವಿಧಿಸಬೇಕೆಂದೂ ಮನವಿ ಮಾಡಿದ್ದಾರೆ. ಈ ಪ್ರಕರಣದ ಪರವಾಗಿ ಖ್ಯಾತ ನ್ಯಾಯವಾದಿ ಎ. ಕೆ. ಸುಬ್ಬಯ್ಯ ವಾದಿಸುತ್ತಿದ್ದಾರೆ.

ಹೀಗೆ ಸಾರ್ವಜನಿಕರಿಗಾಗಿ, ದೇಶಕ್ಕಾಗಿ ಈ ಅರಣ್ಯವುಳಿಸಲು ಹೋರಾಟ ಸಮಿತಿ ಸ್ಥಳೀಯ ಚಳವಳಿ, ನ್ಯಾಯಾಂಗ ಹೋರಾಟ ಮತ್ತು ಪ್ರಚಾರ ಮಾಧ್ಯಮಗಳ ಬಳಕೆ—ಈ ಮೂರು ವಿಧದಲ್ಲಿ ತನ್ನ ಶಕ್ತಿಯನ್ನೂ ಮೀರಿ ಪ್ರಯತ್ನಿಸುತ್ತಿದೆ. ಇದಕ್ಕೆ ನಾಡಿನ ಎಲ್ಲೆಡೆಯ ನ್ಯಾಯಪ್ರಿಯರು, ಪರಿಸರ ಕಳಕಳಿಯುಳ್ಳವರು ಎಲ್ಲಾ ರೀತಿಯಲ್ಲೂ (ತನು, ಮನ, ಧನ) ನೆರವು ನೀಡಬೇಕೆಂದು ವಿನಂತಿಸಿದೆ.

ಸಾ|| ವಿದ್ಯಾರ್ಥಿ ನಿಲಯಗಳಿಗೆ ಅರ್ಜಿ ಆಹ್ವಾನ

ಕೊಪ್ಪ: ಈ ತಾಲ್ಲೂಕಿನಲ್ಲಿ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತರ ಇಲಾಖೆ–ಇವುಗಳ ಆಶ್ರಯದಲ್ಲಿ ನಡೆಯುತ್ತಿರುವ ಈ ಕೆಳಕಂಡ ವಿದ್ಯಾರ್ಥಿ ನಿಲಯಗಳನ್ನು ಮೇ 15ರಿಂದ ಆರಂಭಿಸಲಾಗುವುದು. ಪ್ರವೇಶಕ್ಕೆ ಅರ್ಜಿಗಳನ್ನೂ ಹೆಚ್ಚಿನ ಮಾಹಿತಿಗಳನ್ನೂ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳ ಕಛೇರಿಯಿಂದ ಪಡೆಯಬಹುದು.

ಸಾರ್ವಜನಿಕ ಬಾಲಕರ ವಿದ್ಯಾರ್ಥಿ ನಿಲಯ ಮತ್ತು ಬಾಲಕಿಯರ ವಿದ್ಯಾರ್ಥಿ ನಿಲಯ, ಬಾಳಗಡಿ, ಕೊಪ್ಪ; ಸಾ|| ಬಾಲಕರ ವಿದ್ಯಾರ್ಥಿನಿಲಯ, ಕಮ್ಮರಡಿ; ಹಿಂ|| ವರ್ಗ ಮತ್ತು ಅಲ್ಪ ಸಂಖ್ಯಾತರ ವಿದ್ಯಾರ್ಥಿ ನಿಲಯಗಳು, ಕೊಪ್ಪ ಮತ್ತು ಬಸರೀಕಟ್ಟೆ.

ಅರ್ಜಿ ಸಲ್ಲಿಸಲು ಕೊನೆ ದಿನಾಂಕ 30.5.88

ಮಂಜೂರಾದ ರಸ್ತೆ ಕಾಮಗಾರಿ ಪೂರೈಕೆಗೆ ಗ್ರಾಮಸ್ಥರ ಒತ್ತಾಯ

ದಯಂಬಳ್ಳಿ: ಇಲ್ಲಿಗೆ ಸಮೀಪ ಎತ್ತಿನಹಟ್ಟಿ— ಕಿಕ್ರೆ ರಸ್ತೆಯಲ್ಲಿರುವ ಹಳ್ಳಕ್ಕೆ ಸೇತುವೆ ಮಂಜೂರಾಗಿರುವುದಾಗಿ ಕಳೆದ ವರ್ಷ ಶಾಸಕರ ಪತ್ರಿಕಾ ಹೇಳಿಕೆ ಪ್ರಕಟವಾಗಿದ್ದು, ಇದಕ್ಕಾಗಿ ಗ್ರಾಮಸ್ಥರು, ಮಂಡಲದವರು ಪತ್ರಿಕೆಯ ಮೂಲಕ ಶಾಸಕರಿಗೆ ಕೃತಜ್ಞತೆಯನ್ನೂ ಸಲ್ಲಿಸಿದ್ದರು.

ಆದರೆ ಈ ಕಾಮಗಾರಿ ಇನ್ನೂ ಆರಂಭವಾಗಿಲ್ಲ. 'ಸೇತು ಬಂಧನ' ಯೋಜನೆಯಲ್ಲಿ 90 ಸಾವಿರ ರೂ. ಗೆ ಮಂಜೂರಾಗಿದ್ದ ಇದು ಈಗ ಜಿಲ್ಲಾ ಪರಿಷತ್ತಿಗೆ ಸೇರಿದೆ. ಕಾಮಗಾರಿಗಾಗಿ ಜಿ. ಪ. ಟೆಂಡರ್ ಕರೆದರೆ ಯಾರೂ ಟೆಂಡರ್ ಸಲ್ಲಿಸಿಲ್ಲ. ಈ ಸೇತುವೆಗೆ 90 ಸಾವಿರ ರೂ. ಸಾಕಾಗುವುದಿಲ್ಲ ಎನ್ನಲಾಗಿದೆ. ಹೊಸದಾಗಿ ಎಸ್ಟಿಮೇಟ್ ತಯಾರಿಸಿ, ಕಾಮಗಾರಿ ಮಂಜೂರು ಮಾಡಬೇಕಾಗಿದೆ. ಆದರೆ ಜಿಲ್ಲಾ ಪರಿಷತ್ತಿನ ಹಣದ ಮುಗ್ಗಟ್ಟಿನಿಂದ ಈ ಕೆಲಸ ಆಗಿಲ್ಲ.

ಎಷ್ಟೋ ವರ್ಷಗಳ ಬೇಡಿಕೆಯ ನಂತರ ಮಂಜೂರಾಗಿ ಎರಡು ವರ್ಷವಾಗಿರುವ ಈ ಕಾಮಗಾರಿ ಈಗಲಾದರೂ ಕೈಗೂಡಲೆಂದು ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಮನಿ ಆರ್ಡರ್ ನಾಪತ್ತೆ

ಹೇರೂರು: ಇಲ್ಲಿನ ಬಸ್‌ಸ್ಟ್ಯಾಂಡ್ ಹೋಟೆಲ್ ಮಾಲೀಕ ಕೃಷ್ಣ ನಾಯ್ಕರು ಹೇರೂರು ಅಂಚೆ ಕಚೇರಿಯಿಂದ ಚಿಟ್ಪಾಡಿಯ ದೇವಾಲಯಕ್ಕೆ ಆರು ತಿಂಗಳ ಹಿಂದೆ 50 ರೂ. ಎಂ.ಒ. ಮಾಡಿದ್ದರು. ಆದರೆ ಅವರಿಗೆ ಹಿಂತಿರುಗಿ ರಶೀದಿ ಕೈ ಸೇರಿದ್ದು 5 ರೂಪಾಯಿಗಳಿಗೆ. ಈ ಬಗ್ಗೆ ಸಂಬಂಧಿಸಿದ ಇಲಾಖೆಯ ಅಧಿಕಾರಿ ವರ್ಗಕ್ಕೆ ವರದಿಯೂ ಆಯಿತು. ಪರಿಶೀಲಿಸುವ ಭರವಸೆ ಪತ್ರವೂ 3 ತಿಂಗಳ ಹಿಂದೆ ಬಂತು. ಆದರೆ ಈವರೆಗೂ ಆ ಐವತ್ತು ರೂಪಾಯಿ ಕತೆ ಗೊತ್ತಾಗಿಲ್ಲ. 'ಇದೆಂಥಾ ಪವಾಡ!' ಎಂದು ನಾಯ್ಕರು ಕೇಳುತ್ತಿದ್ದಾರೆ.

ಸಂಕ್ಷಿಪ್ತ ಸುದ್ದಿಗಳು

ರಥೋತ್ಸವ

ಜೊನ್ನಾಪುರದಲ್ಲಿ ತ್ರಿಪುರಾಂತಕೀ ಅಮ್ಮನವರ ಜಾತ್ರೆ ಏ 23ರಿಂದ 27ರವರೆಗೆ ನಡೆಯಲಿದ್ದು, 25ರಂದು ಮಹಾರಥೋತ್ಸವವಿದೆ. ಈ ಸಂದರ್ಭದಲ್ಲಿ ಯುವಕ ಸಂಘ, ಯುವತಿ ಮಂಡಳಿಯಿಂದ ಮನರಂಜನಾ ಕಾರ್ಯಕ್ರಮಗಳಿರುತ್ತವೆ.

ಕೆಸವೆ ಸಹಕಾರ ಸಂಘ

ಕೊಪ್ಪ ತಾ|| ಕೆಸವೆಯ ವ್ಯ. ಸೇ. ಸಹಕಾರ ಸಂಘವು ಕೊಪ್ಪ ತಾ|| ಸಂಘದಿಂದ ಪ್ರತ್ಯೇಕವಾಗಿ ಕಾರ್ಯ ನಿರ್ವಹಿಸಲು ತನ್ನ ಅಭ್ಯಂತರವಿಲ್ಲವೆಂದು 16.3.88ರ ಆದೇಶದಲ್ಲಿ ರಾಜ್ಯ ಸರ್ಕಾರ ತಿಳಿಸಿದೆ. ಈ ಬಗ್ಗೆ ಸಹಕಾರ ಮಂತ್ರಿಗಳಿಗೆ, ಶಾಸಕರಿಗೆ, ಡಿ ಸಿ. ಸಿ. ಬ್ಯಾಂಕ್ ಅಧ್ಯಕ್ಷರಿಗೆ ಮತ್ತು ಸಹಕಾರ ಇಲಾಖೆ ಅಧಿಕಾರಿಗಳಿಗೆ ಕೆ. ಎಸ್. ಶಾಂತಾರಾಂ ಕೃತಜ್ಞತೆ ಸಲ್ಲಿಸಿದ್ದಾರೆ.

ಯಕ್ಷಗಾನ ಮಂಡಳಿ

ಹರಿಹರಪುರದ 'ಮಹೋದಯ ಯಕ್ಷಗಾನ ಕಲಾ ಮಂಡಳಿ'ಯ ಮೊದಲ ವಾರ್ಷಿಕೋತ್ಸವ ಏ. 26ರಂದು ಮಾಜಿ ಮುಖ್ಯಮಂತ್ರಿ ಆರ್. ಗುಂಡೂರಾವ್ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ರಾತ್ರಿ 9.30ಕ್ಕೆ ತಾಳ ಮದ್ದಳೆ ಕಾರ್ಯಕ್ರಮವಿದೆ.

ಗೃಹ ರಕ್ಷಕ ದಳ

ಕೊಪ್ಪ ಗೃಹ ರಕ್ಷಕ ದಳಕ್ಕೆ ಸೇರಬಯಸುವವರು ಭಾನುವಾರ ಬೆಳಿಗ್ಗೆ 8–30ಕ್ಕೆ ದಳದ ಕಛೇರಿಯಲ್ಲಿ ಘಟಕಾಧಿಕಾರಿಯವರನ್ನು ಸಂಪರ್ಕಿಸಬಹುದು. ಏಪ್ರಿಲ್ ತಿಂಗಳ ಕೊನೆಯವರೆಗೆ ಅವಕಾಶವಿದೆ. ಟೌನಿನಿಂದ 3 ಕಿ ಮೀ. ಒಳಗೆ ವಾಸ ಇರಬೇಕು.

ಸರ್ವೋದಯ ಕೃತಜ್ಞತೆ

ಕೊಪ್ಪದ ಸರ್ವೋದಯ ಯುವಕ ಸಂಘ ಈಚೆಗೆ ನಡೆಸಿದ ರಾಜ್ಯ ಮಟ್ಟದ ಕೆಸರು ಗದ್ದೆ ಓಟ ಯಶಸ್ವಿಯಾಗಲು ನೆರವಾದ ಎಲ್ಲರಿಗೂ ಕೃತಜ್ಞತೆ ಸಲ್ಲಿಸಿದೆ.

ಸಂಘಕ್ಕೆ ಜಿಲ್ಲೆಯ 1987–88ನೇ ಸಾಲಿನ ಉತ್ತಮ ಯುವಕ ಸಂಘ ಎಂಬ ಪುರಸ್ಕಾರವೂ ಬಂದಿದೆ.

ಅಡಿಕೆ ಧಾರಣೆ

ಶಿವಮೊಗ್ಗ 14–4–1988
ಸರಕು 3500 – 4538
ಬೆಟ್ಟೆ 2300 – 3210
ಗೊರಬಲು : 800 – 1310

ಏಲಕ್ಕಿ ಧಾರಣೆ

ಸಕಲೇಶಪುರ 2–4–1988
145–158

ಮಂಗಳೂರು 16.4.1988
ಏಲಕ್ಕಿ : 140 – 160
ಕಾಳು ಮೆಣಸು: 3776

ಬಿಂತ್ರವಳ್ಳಿ ಮಂಡಲ ಪಂಚಾಯ್ತಿ
ಕೊಪ್ಪ ತಾ||, ಚಿಕ್ಕಮಗಳೂರು ಜಿಲ್ಲೆ.

ದಿನಾಂಕ 13–4–1988

ಪ್ರಕಟಣೆ

ಬಿಂತ್ರವಳ್ಳಿ ಮಂಡಲ ಪಂಚಾಯ್ತಿಯ ಬಾಳಗಡಿಯಲ್ಲಿರುವ ಮಾಂಸದ ಅಂಗಡಿಯ 1988–89ರಿಂದ 1990–91ರ ವರೆಗಿನ ಲೀಸ್ ಹರಾಜನ್ನು ತಾ. 28–4–88ರಂದು ಮಧ್ಯಾಹ್ನ 1–00 ಘಂಟೆಗೆ ಬಿಂತ್ರವಳ್ಳಿ ಮಂಡಲ ಪಂಚಾಯ್ತಿ ಕಛೇರಿಯಲ್ಲಿ ನಡೆಸಲಾಗುವುದು. ಇಷ್ಟವುಳ್ಳವರು ಭಡ ಸವಾಲಿನಲ್ಲಿ ಭಾಗವಹಿಸಿ ಪಡೆಯಬಹುದಾಗಿರುತ್ತೆ. ಹೆಚ್ಚಿನ ವಿವರಗಳಿಗೆ ಈ ಕಛೇರಿಗೆ ಭೇಟಿ ನೀಡಿ

ಕೆ. ವಿ. ಅಜಿಲ
ಪ್ರಧಾನರು.

ಎಸ್. ರಾಮೇಗೌಡ
ಕಾರ್ಯದರ್ಶಿ

ಶ್ರೀ ಶಾರದಾ ವಿದ್ಯಾ ಮಂದಿರ (ರಿ.)

(ಆಂಗ್ಲ ಮಾಧ್ಯಮ ವಸತಿ ಶಾಲೆ), ಕೊಪ್ಪ

ಬೇಕಾಗಿದ್ದಾರೆ

	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ವಿದ್ಯಾರ್ಹತೆ ಅನುಭವ
1.	ಮುಖ್ಯೋಪಾಧ್ಯಾಯಿನಿ	1	ಆಂಗ್ಲ ಮಾಧ್ಯಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಟಿಸಿಎಚ್ ವಿ.ವಿ. ಪದವಿ ಮತ್ತು ಅನುಭವ ಇರುವವರಿಗೆ ಆದ್ಯತೆ.
2.	ಸಹ ಉಪಾಧ್ಯಾಯಿನಿ	1	ಆಂಗ್ಲ ಮಾಧ್ಯಮದಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಟಿಸಿಎಚ್ ಅಥವಾ ವಿಶ್ವವಿದ್ಯಾನಿಲಯದ ಪದವಿ
3.	"	1	ಎಸ್‌ಎಸ್‌ಎಲ್‌ಸಿ ಮತ್ತು ಟಿಸಿಎಚ್ (ಇಂಗ್ಲಿಷ್ ಮಾಧ್ಯಮ) (ಇಂಗ್ಲಿಷ್ ಮಾಧ್ಯಮದ ಪದವಿ ಪಡೆದವರಿಗೆ ಆದ್ಯತೆ)
4.	"	1	ಎಸ್ಸೆಸ್ಸೆಲ್ಸಿ ಮತ್ತು ಬಾಲಸೇವಿಕಾ ತರಬೇತಿ
5.	"	1	ವಿ.ವಿ. ಪದವಿ (ಇಂಗ್ಲಿಷ್ ಭಾಷೆಯಲ್ಲಿ ಉತ್ತಮ ಅಂಕದೊಂದಿಗೆ ಅಥವಾ ಆಂಗ್ಲಮಾಧ್ಯಮ ಟಿಸಿಎಚ್)
6.	ಆಯಾ	2	7ನೇ ತರಗತಿ ವಿದ್ಯಾಭ್ಯಾಸ
7.	ಅಟೆಂಡರ್–ಕಂ–ರಾತ್ರಿ ಕಾವಲುಗಾರ (ಗಂಡಸು)	1	ಎಸ್ಸೆಸ್ಸೆಲ್ಸಿ ಒಳಗಿನ ವಿದ್ಯಾಭ್ಯಾಸ —ಪ. ಜಾತಿ/ವರ್ಗಕ್ಕೆ ಮೀಸಲು

ಮೇಲ್ಕಂಡ ಹುದ್ದೆಗಳಿಗೆ ಸ್ವಹಸ್ತಾಕ್ಷರದಲ್ಲಿ ಬಿಳಿ ಹಾಳೆಯ ಮೇಲೆ ಹೆಸರು, ವಿಳಾಸ, ವಿದ್ಯಾರ್ಹತೆ, ಅರ್ಹತಾ ಪಟ್ಟಿ, ಅನುಭವದ ನಕಲು ಪ್ರತಿ ಲಗತ್ತಿಸಿ ಹತ್ತು ರೂಪಾಯಿನ **ಖಾಲಿ ಪೋಸ್ಟಲ್ ಆರ್ಡರ್**ನೊಂದಿಗೆ ಶ್ರೀ ಶಾರದಾ ವಿದ್ಯಾ ಮಂದಿರ, ಮುಖ್ಯ ರಸ್ತೆ, ಕೊಪ್ಪ, ಇವರ ವಿಳಾಸಕ್ಕೆ **1–5–1988**ರ ಸಂಜೆ ಒಳಗೆ ತಲುಪುವಂತೆ ಕಳುಹಿಸತಕ್ಕದ್ದು.

ಸಂದರ್ಶನ ಶಾರದಾ ವಿದ್ಯಾ ಮಂದಿರದಲ್ಲಿ ದಿನಾಂಕ **4–5–88**ರ ಬೆಳಿಗ್ಗೆ 10.30 ಘಂಟೆಗೆ. ಅರ್ಹತೆಗಳ ಅಸಲು ಪ್ರತಿಗಳೊಂದಿಗೆ ಖುದ್ದು ಹಾಜರಾಗತಕ್ಕದ್ದು.

ಕಮಿಟಿ ಅಪ್ಪಣೆ ಮೇರೆಗೆ

ತಾ|| 10–4–88

ಕಾರ್ಯದರ್ಶಿ

ವಿ ಸೂ :— ಮೇಲ್ಕಂಡ ಶಾಲೆಗೆ ಸೇರಬಯಸುವ ವಿದ್ಯಾರ್ಥಿಗಳಿಗೆ ಪ್ರವೇಶ ಪತ್ರಗಳನ್ನು 25–4–88ರಿಂದ 5.5.88ರವರೆಗೆ ಆಫೀಸು ಸಮಯದಲ್ಲಿ ಕೊಡಲಾಗುತ್ತೆ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ : ಸಿರಿಮನೆ ನಾಗರಾಜ್, ಅಚ್ಚು : ದೀಪಟಿಗೆ ಅಚ್ಚು ಕೂಟ, ಕೊಪ್ಪ.